# ಶ್ರೀ ಸೂರೀಂದ್ರತೀರ್ಥಸ್ತುತ್ಯಷ್ಟಕಮ್

( ಅರ್ಥಾಲಂಕಾರಭೂಯಿಷ್ಠಾ )



(1686 – 1692)

ರಚನೆ : ಶ್ರೀ ವಾದಿರಾಜಾಚಾರ್ಯ ರಾ. ಪಂಚಮುಖಿ

Rarest Archiver

# ಶ್ರೀಸೂರೀಂದ್ರತೀರ್ಥಸ್ತುತ್ಯಷ್ಟಕಮ್

## (ಅರ್ಥಾಲಂಕಾರಭೂಯಿಷ್ಠಾ)

---

ರಚಯಿತಾ : ವಾಚಸ್ಪತಿ. ಡಾ. ವಾದಿರಾಜಾಚಾರ್ಯ. ರಾ. ಪಂಚಮುಖಿ
ಕುಲಪತಿ, ಶ್ರೀಗುರುಸಾರ್ವಭೌಮ ಸಂಸ್ಕೃತವಿದ್ಯಾಪೀಠ, ಮಂತ್ರಾಲಯ

ರೂಪಕಾಲಂಕಾರ :-

ಶ್ರೀಸೂರೀಂದ್ರಗುರುಃ ಸುರಾಹಿತಸರುಃ ಸೂರೀಢ್ಯಶಾಸ್ತ್ರಂಭರುಃ
ದುಸ್ಸೂರಾಗ್ರ್ಯತಮೋಽಪ (ಸಾ) ಹಾರಸುಚರುಃ ಸೂರಾಭಸೂರಂಧರುಃ ।
ಸೀರೋತ್ಕರ್ಷಣಜಾತಜಾನಿಮಜನಿಂ ಸಂಸಾರನಿಸ್ಸಾರಕಮ್
ಸಂಸ್ಕೃತ್ಯಾಶ್ರಿತಸೂರಸಾರಸುಗುಣಾನ್ ಸಂಸೇವಕಾನ್ಪಾತ್ವಲಮ್ ॥ 1 ॥

ಸುರಾಹಿತಸರುಃ – ಸುರರಿಗೆ ಅಹಿತವನ್ನು ಮಾಡುವವರಿಗೆ ಸರುಃ – ಖಡ್ಗದ ಹಿಡಿಕೆ ಇದ್ದಂತೆ ಅಂದರೆ ಖಡ್ಗದಂತೆ ಇರುವ, ಸೂರೀಡ್ಯಶಾಸ್ತ್ರಂಭರು – ಪಂಡಿತರಿಂದ ಸ್ತೋತ್ರಮಾಡಲ್ಪಟ್ಟ ಶಾಸ್ತ್ರಂ – ಉತ್ತಮ ಶಾಸ್ತ್ರಗ್ರಂಥಗಳನ್ನು ಭರುಃ – ಪೂರ್ಣವಾಗಿ ಅಧ್ಯಯನ ಮಾಡಿದವರಾದ, ದುಸ್ಸೂರಾಗ್ರ್ಯತಮೋಽಪಹಾರಸುಚರುಃ – ದುಸ್ಸೂರ – ದುಷ್ಟ ಪಂಡಿತರು, ಮಾಯಾವಾದದ ಪಂಡಿತರು ಅವರೇ ಅಗ್ರ್ಯತಮಃ – ಗಾಢವಾದ ತಮಸ್ಸು, ಕತ್ತಲೆ, ಅದನ್ನು ಅಪಹಾರ ವಿನಾಶ ಮಾಡುವದರಲ್ಲಿ ಸುಚರುಃ – ಅತ್ಯಂತವಾಗಿ ಪ್ರವೃತ್ತರಾದಂಥ, ಸೂರಾಭಸೂರಂಧರುಃ – ಸೂರಾಭ – ಸೂರ್ಯನ ಕಾಂತಿಯುಳ್ಳ ಸೂರಂಧರುಃ – ಪಂಡಿತರನ್ನು ಪೋಷಣೆಮಾಡುವವರಾದ, ಶ್ರೀಸೂರೀಂದ್ರಗುರುಃ – ಶ್ರೀಸೂರೀಂದ್ರತೀರ್ಥರೆಂಬ ಗುರುಗಳು, ಅಜನಿಂ ಜನ್ಮಮೃತ್ಯುರಹಿತರಾದಂಥ, ಸಂಸಾರನಿಸ್ಸಾರಕಂ – ಭಕ್ತರಿಗೆ ಸಂಸಾರವನ್ನು ನಿವಾರಣೆಮಾಡುವವರಾದ, ಸೀರೋತ್ಕರ್ಷಣಜಾತಜಾನಿಂ – ಸೀರೋತ್ಕರ್ಷಣ – ನೇಗಿಲನ್ನು ಕರ್ಷಣಮಾಡುವ ಸಮಯದಲ್ಲಿ ಜಾತ – ಉತ್ಪನ್ನಳಾದ ಸೀತಾದೇವಿಯೇ ಜಾನಿಃ – ಪತಿಯಾಗಿ ಉಳವನನ್ನು ಅಂದರೆ ಶ್ರೀಮೂಲರಾಮಚಂದ್ರನನ್ನು ಸಂಸ್ಕೃತ್ಯ – ಆಶ್ರಯಿಸಿ, ಅವನ ಸೇವೆಯಿಂದ ಪ್ರಾಪ್ತವಾದ ಪುಣ್ಯದ ಫಲವಾಗಿ, ಆಶ್ರಿತಸೂರಸಾರಸುಗುಣಾನ್–ಆಶ್ರಿತ–ಆಶ್ರಿತರಾದ ಭಕ್ತರಾದ, ಸೂರಸಾರ – ಜ್ಞಾನಿಗಳ ಜ್ಞಾನಸಾರದ ಸುಗುಣಾನ್ – ಒಳ್ಳೆಯ ಗುಣಗಳುಳ್ಳವರಾದ, ಸಂಸೇವಕಾನ್, ಉತ್ತಮರಾದ ಸೇವಕರನ್ನು, ಅಲಂ – ಚೆನ್ನಾಗಿ ಪಾತು – ರಕ್ಷಣೆ ಮಾಡುವವರಾಗಲಿ.

ಇಲ್ಲಿ ಶ್ರೀಗಳವರು ಮಾಯಾವಾದವೆಂಬ ಕತ್ತಲೆಯನ್ನು ನಿವಾರಿಸಲು ಸೂರ್ಯನಾಗಿದ್ದರೆ ಎಂದು ರೂಪಲಂಕಾರವೆಂಬ ಅರ್ಥಾಲಂಕಾರವಿದೆ. ಅಲ್ಲದೆ , 'ಸ' ಎಂಬ ಅಕ್ಷರವು, ಹಾಗೂ 'ರ' ಎಂಬ ಅಕ್ಷರವು ಹಾಗೂ 'ಜ' ಎಂಬ ಅಕ್ಷರವು, 'ನಿ' ಎಂಬ ಅಕ್ಷರವು ಪುನರುಚ್ಛರಿತವಾದುದರಿಂದ ಎಂಬ ಶಬ್ದಾಲಂಕರವೂ ಇವೆ.

ಉತ್ಪ್ರೇಕ್ಷಾಲಂಕಾರಃ –

ಶ್ರೀಸೂರೀಂದ್ರಗುರೋಃ ಸುಕೀರ್ತಿಸರಿತಃ ಸ್ತೋತ್ರೋಽತಿಶೇತೆ ಪರಮ್
ತ್ರಿಃಸ್ರೋತಾ ನು ಬಿಭೇತಿ ಸೀದನಮಲಂ ತಸ್ಯಾಶ್ಚ ಸಂತೋಲನೇ ।

Rarest Archiver

ನಿಃಸ್ಯಂದಃ ಸುಯಶೋಧುನೀವಹಗತೋ ವ್ಯಾಪ್ನೋತಿ ಭೂಮಂಡಲಮ್
ಗಾಂಗೌಘೋ ನಿಯತಂ ಭುವಂ ಪ್ರಸರತೀತ್ಯಾಹೋ ಪರಂ ವಿಸ್ಮಯಮ್ ॥ 2 ॥

ಶ್ರೀಸೂರೀಂದ್ರಗುರೋಃ – ಶ್ರೀಸೂರೀಂದ್ರತೀರ್ಥಗುರುಗಳ ಸುಕೀರ್ತಿಸರಿತಃ – ಉತ್ತಮವಾದ ಕೀರ್ತಿಯೆಂಬ ನದಿಯ ಸ್ರೋತಃ – ಪ್ರವಾಹವು ಪರಂ ಅತಿಶೇತೆ – ಎಲ್ಲವನ್ನೂ ಮೀರಿಸಿ ಇದೆ. ತ್ರಿಃಸ್ರೋತಾಃ – ತ್ರಿಃಸ್ರೋತಸ್ ಎಂದು ಪ್ರಸಿದ್ಧವಾದ ಗಂಗಾ ನದಿಯ ಪ್ರವಾಹವೂ ಕೂಡ, ತಸ್ಯಾಃ ಸಂತೋಲನೇ – ಇದರೊಡನೆ ಹೋಲಿಸಿದರೆ ಅಲಂ ಸೀದನಂ – ಎಲ್ಲಿ ತನ್ನ ಹಿರಿಮೆಯು ಕಡಿಮೆಯಾಗುವದೋ ಬಿಭೇತಿ – ಎಂದು ಹೆದರಿಕೊಳ್ಳುತ್ತದೆ. ಸುಯಶೋಧುನೀವಹಗತಃ – ಗುರುಗಳ ಉತ್ತಮ ವಾದ ಕೀರ್ತಿಯ ನದಿಯ ನಿಃಸ್ಯಂದಃ – ಪ್ರವಾಹವು ಭೂಮಂಡಲಂ – ಇಡೀ ಭೂಮಂಡಲವನ್ನು ವ್ಯಾಪ್ನೋತಿ – ವ್ಯಾಪಿಸಿ ಶೋಭಿಸುತ್ತದೆ. ಗಾಂಗೌಘಃ – ಆದರೆ ಗಂಗಾ ನದಿಯ ಪ್ರವಾಹವು ನಿಯತಂ ಭುವಂ – ಭೂಮಂಡಲದ ಕೆಲವೇ ಭಾಗದಲ್ಲಿ ಪ್ರಸರತಿ – ವ್ಯಾಪಿಸಿಕೊಂಡು ಇದೆ. ಇತಿ ಅಹೋ – ಈ ವಿಷಯವು ಪರಂ ವಿಸ್ಮಯಂ – ಅತ್ಯಂತ ಆಶ್ಚರ್ಯಕರವಾದುದು.

ಇಲ್ಲಿ ಉತ್ಪ್ರೇಕ್ಷಾಲಂಕಾರವು ಇದೆ.

**ಅತಿಶಯೋಕ್ತ್ಯಲಂಕಾರಃ**

ಗೌತಮ್ಯೋ ವರರಾಘವೇಂದ್ರಮುನಿಪೋ ಮಾಂತ್ರೀಂ ಋಷೀಣಾಂ ವಶಾಂ
ಗಾಮಾಮೋಚಯದೇವ ಮೃತ್ಯುಮುಖತೋ ಗೋಸಂತತೇಃ ಪೋಷಣಾತ್ ।
ವೇದಾಂತೋಪನಿಷತ್ಪ್ರಮೇಯವಿಸರಂ ಸಂಸಾಧಯನ್ನಿತ್ಯಶಃ
ವೇದವ್ಯಾಸಪದಂ ಸಮಾಹಿತವತಃ ಭಕ್ತಪ್ರಶಿಷ್ಯೋ ಮುನಿಃ ॥ 3 ॥

ಗೌತಮ್ಯಃ – ಗೌತಮಗೋತ್ರದಲ್ಲಿ ಜನಿಸಿದ, ವರರಾಘವೇಂದ್ರಮುನಿಪಃ – ಶ್ರೇಷ್ಠರಾದ ಶ್ರೀರಾಘವೇಂದ್ರಮುನಿಗಳು, ಮಾಂತ್ರೀಂ – ಗೌತಮಮುನಿಯ ಆಶ್ರಮದಲ್ಲಿ ಸೇರಿದ ಮುನಿಗಳಿಂದ ಮಾಂತ್ರಿಕವಾಗಿ ನಿರ್ಮಿತವಾದ, ಋಷೀಣಾಂ ವಶಂ – ಆ ಋಷಿಗಳಿಗೆ ವಶವಾಗಿದ್ದ ಗಾಂ – ಆಕಳವನ್ನು ಮೃತ್ಯುಮುಖತಃ – ಅಕಾಲಮೃತ್ಯುವಿನ ದವಡೆಯಿಂದ ಅಮೋಚಯದೇವ – ಬಿಡಿಸಿ ಪಾರು ಮಾಡಿದರು. ಅದು ಹೇಗೆ ಸಾಧ್ಯವಾಯಿತು ಎಂದರೆ ಹೀಗೆ. ಗೋಸಂತತೇಃ – ವೇದಗಳ ಸಮೂಹದ (ಗೋ – ಆಕಳು, ಹಾಗೂ ವೇದವಾಕ್ಯಗಳು), ಪೋಷಣಾತ್ – ವೇದತ್ರಯವೆಂಬ ವೇದಗಳ ವ್ಯಾಖ್ಯಾನರೂಪವಾದ ಕೃತಿಯನ್ನು ರಚಿಸಿ ವೇದವಾಕ್ಯಗಳ ಅಂದರೆ 'ಗೋ' ವಿನ, ರಕ್ಷಣೆಯನ್ನು ಮಾಡಿದರು ಎಂದು ಅತಿಶಯೋಕ್ತಿಯು ಇಲ್ಲಿದೆ. ಇದಲ್ಲದೆ, ವೇದಾಂತ, ಉಪನಿಷತ್, ಇತ್ಯಾದಿಗಳಲ್ಲಿ ಪ್ರತಿಪಾದಿತವಾದ ಪ್ರಮೇಯಗಳ ಪ್ರಸಾರವನ್ನು ನಿತ್ಯವಾಗಿಯೂ ಸಾಧಿಸುತ್ತ ಶ್ರೀವೇದವ್ಯಾಸದೇವರು ಮಾಡಿದ, ವೇದಗಳ ಹಾಗೂ ವೇದಾಂತಗಳ ಪುನರುದ್ಧಾರವನ್ನು ಮಾಡಿದ ಶ್ರೀಗುರುಗಳಾದ ಶ್ರೀರಾಘವೇಂದ್ರತೀರ್ಥರು, ವೇದವ್ಯಾಸದೇವರ ಸ್ಥಾನವನ್ನು ಗಳಿಸಿಂದಥವರು ಅವರು. ಅಂಥ ಶ್ರೀರಾಘವೇಂದ್ರತೀರ್ಥರ ಪ್ರಶಿಷ್ಯಾರದವೌ ಶೀಸೂರೀಂದ್ರತೀರ್ಥರು ಶೋಭಿಸುತ್ತಾರೆ, ಎಂಬುದು ತಾತ್ಪರ್ಯ.

ಇಲ್ಲಿ ಅತಿಶಯೋಕ್ತಿಯೆಂಬ ಅಲಂಕಾರವಿದೆ.

**ವಿರೋಧಭಾಸಾಲಂಕಾರಃ**

ಸ್ವರ್ಗೇಶಸ್ಯ ಸಭಾಸುಕಾಂತಿನಿಕರಂ ನಿರ್ಜಿತ್ಯ ವಿದ್ಯಾಸಭಾ
ಶ್ರೀಸೂರೀಂದ್ರಗುರೋಸ್ತು ಭೂಮಿವಿಬುಧೈಃ ಸಂಪಾದಿತಾ ಶೋಭತೇ ।

Rarest Archiver

**ಸ್ವರ್ಗೀಯೈಸ್ತು ಸುಧಾಸುಪಾನವಿತತೇಃ ಸಂಸಾಧ್ಯತೇ ನೈರ್ಜರಮ್**
**ಮುಕ್ತಿರ್ವೈತು ಫಲಂ ವಿಚಾರಮಥನೇ ವಿದ್ವತ್ಸಭಾಸಾಧಿತೇ ॥ 4 ॥**

ಸ್ವರ್ಗೇಶಸ್ಯ - ಸ್ವರ್ಗಾಧಿಪತಿಯಾದ ಇಂದ್ರನ ಸಭಾಸುಕಾಂತಿನಿಕರಂ - ಸಭೆಯ ಉತ್ತಮವಾದ ಕಾಂತಿಯ ಸಮೂಹವನ್ನು, ನಿರ್ಜಿತ್ಯ - ಹಿಮ್ಮೆಟ್ಟಿ ಅಂದರೆ ಅದರಕಿಂತ ಹೆಚ್ಚಿನ ಕಾಂತಿಯುಳ್ಳ, ಶ್ರೀಸೂರೀಂದ್ರಗುರೋಃ - ಶ್ರೀಸೂರೀಂದ್ರತೀರ್ಥರೆಂಬ ಗುರುಗಳ ವಿದ್ಯಾಸಭಾ ವಿದ್ವತ್ಸಭೆಯು, ತು - ಮಾತ್ರ, ಭೂಮಿವಿಬುಧೈಃ - ಭೂಸುರರಿಂದ ಅಂದರೆ ವಿದ್ವಾಂಸರಾದ ಬ್ರಾಹ್ಮಣರಿಂದ ಸಂಪಾದಿತಾ - ಸಂಪಾದಿಸಲ್ಪಟ್ಟದ್ದಾಗಿ, ಅಂದರೆ ಆಯೋಜಿಸಲ್ಪಟ್ಟದ್ದಾಗಿ ಶೋಭಿಸುತ್ತದೆ. ಇದಕ್ಕೆ ಕಾರಣವನ್ನು ಮುಂದಿನ ಎರಡು ಸಾಲುಗಳಲ್ಲಿ ವಿವರಿಸುತ್ತಾರೆ. ಸ್ವರ್ಗೀಯೈಃ - ಸ್ವರ್ಗದಲ್ಲಿ ಇರುವವರಿಂದ ಸುಧಾನುಪಾನವಿತತೇಃ - ಇಂದ್ರಸಭೆಯಲ್ಲಿ ಪ್ರಾಪ್ತವಾದ ಸುಧೆಯ ಅಂದರೆ ಅಮೃತಹ ಪಾನದ ವಿಸ್ತಾರದಿಂದ, ನೈರ್ಜರಮ್ - ಬಹಳವಾದರೆ ಅಲ್ಪಸುಖದ ಅಮರತ್ವವು ಸಂಸಾಧ್ಯತೆ - ಸಾಧಿಸಲ್ಪಡುತ್ತದೆ. ಆದರೆ, ವಿದ್ವತ್ಸಭಾಸಾಧಿತೇ - ಶ್ರೀಸೂರೀಂದ್ರತೀರ್ಥರಿಂದ ಆಯೋಜಿತವಾದ ವಿದ್ವತ್ಸಭೆಯಲ್ಲಿ ಸಾಧಿತವಾದ, ವಿಚಾರಮಥನೇ - ಶ್ರೀಮನ್ನ್ಯಾಯಸುಧಾದಿ ಶಾಸ್ತ್ರಗ್ರಂಥಗಳ ವಿಚಾರಗಳ ಮಥನದಿಂದ, ಜ್ಞಾನವುಂಟಾಗಿ, ಶಾಶ್ವತಸುಖರೂಪವಾದ ಮುಕ್ತಿಃ ವೈ - ಮೋಕ್ಷವೆಂಬ ಫಲಂ ತು - ವಿಶಿಷ್ಟವಾದ ಫಲವು ಮಾತ್ರ ದೊರೆಯುತ್ತದೆ. ಆದ್ದರಿಂದ ಶ್ರೀಸೂರೀಂದ್ರತೀರ್ಥರ ವಿದ್ವತ್ಸಭೆಯು ಇಂದ್ರನ ಸಭೆಗಿಂತ ಮಿಗಿಲಾದುದು ಆಗಿದೆಯೆಂಬುದು ತಾತ್ಪರ್ಯಾರ್ಥವಾಗಿದೆ.

ಇಲ್ಲಿ ವಿರೊಧಾಭಾಸವೆಂಬ ಅಲಂಕಾರವಿದೆಯೆಂದು ಗಮನಿಸಬಹುದು.

**ತುಲ್ಯಯೋತಿತಾಲಂಕಾರಃ -**

**ಕಲ್ಪದ್ರುಃ ಸ್ವಕಬೀಜವಾಹನವಿಧಾಮಾಶ್ರಿತ್ಯ ಜಾನ್ಯಂ ದ್ರುವಮ್**
**ಸಂಪಾದ್ಯಾತ್ಮಪರಂಪರಾಂ ನು ಜನಯೇದಿತ್ಯೇವ ಮಾನ್ಯಾ ಗತಿಃ ।**
**ಶ್ರೀಸೂರೀಂದ್ರಗುರುಶ್ಚ ಕಲ್ಪತರುರಿತ್ಯಾವ್ಯಾನಮಾನ್ಯಂ ಗುರುಮ್**
**ಸ್ವೀಯಂ ಪ್ರೇಷ್ಠಗುರುಂ ಪ್ರಪದ್ಯ ರುಚಿರಂ ಹ್ಯಾಪ್ನೋಚ್ಚ ಸಾರೂಪತಾಮ್ ॥ 5 ॥**

ಕಲ್ಪದುಃ - ಕಲ್ಪವೃಕ್ಷವು ಸ್ವಕಬೀಜವಾಪನವಿಧಾಂ - ಸ್ವಕ - ತನ್ನ, ಬೀಜಾವಾಹಣವಿಧಾಂ - ಬೀಜಗಳನ್ನು ಬಿತ್ತುವ ಪದ್ಧತಿಯನ್ನು, ಆಶ್ರಿತ್ಯ - ಆಶ್ರಯಿಸಿ, ಅನ್ಯಂ - ಬೇರೆಯ ದ್ರುಮಂ - ವೃಕ್ಷವನ್ನು, ಸಂಪಾದ್ಯ - ಪಡೆದು, ಆತ್ಮಪರಂಪರಾಂ - ತನ್ನ ಪರಂಪರೆಯನ್ನು ನು -ಖಂಡಿತವಾಗಿಯೂ ಜನಯೇತ್ - ಬೆಳೆಸುತ್ತದೆ ಇತ್ಯೇವ - ಎಂಬುದೇ ಮಾನ್ಯಾ ಗತಿಃ - ಸರ್ವಸಮ್ಮತವಾದ ವ್ಯವಸ್ಥೆಯಾಗಿದೆ. ಇದೇ ರೀತಿಯಾಗಿ, ಶ್ರೀಸೂರೀಂದ್ರಗುರುಃ ಚ - ಶ್ರೀಸೂರೀಂದ್ರಗುರುಗಳಾದರೋ, ಕಲ್ಪತರುಃ - ಕಲ್ಪತರು ಇತಿ - ವೆಂಬ ಆಖ್ಯಾನಮಾನ್ಯಂ - ಹೆಸರಿನಿಂದ ಸರ್ವಮಾನ್ಯರಾದ ಗುರುಂ - ಗುರುಗಳಾದ ಶ್ರೀರಾಘವೇಂದ್ರತೀರ್ಥರನ್ನು, ಸ್ವೀಯಂ - ತಮ್ಮದೇ ಆದ ಪ್ರೇಷ್ಠಗುರುಂ - ಅತ್ಯಂತ ಪ್ರೀತ್ಯಾಸ್ಪದರಾದ ಗುರುಗಳನ್ನಾಗಿ ಪಡೆದು, ರುಚಿರಂ - ಎಲ್ಲರಿಗೂ ಮಾನ್ಯವಾಗುವಂತೆ ಸಾರೂಪತಾಂ ಚ - ಕ್ಲಪವೃಕ್ಷವೆಂಬ ಅದೇ ಖ್ಯಾತಿಯನ್ನು ಆಪ್ನೋತ್ ಹಿ - ಖಂಡಿತವಾಗಿಯೂ ಪಡೆದರು.

ಇಲ್ಲಿ ಶ್ರೀರಾಘವೇಂದ್ರಸ್ವಾಮಿಗಳಿಗೆ ಹಾಗೂ ಶ್ರೀಸೂರೀಂದ್ರತೀರ್ಥರಿಗೆ ಸಮಾನವಾದ ಖ್ಯಾತಿ ಬಂದುದರಿಂದ 'ತುಲ್ಯಯೋಗಿತಾಲಂಕಾರ' ಎಂಬ ಅಲಂಕಾರವು ಪ್ರಾಪ್ತವಾಗಿದೆ.

Rarest Archiver

**ವ್ಯತಿರೇಕಾಲಂಕಾರಃ -**

> **ಶ್ರೀಸೂರೀಂದ್ರಗುರುಃ ಸುರೇಂದ್ರವಿಭವಶ್ಚಾಧ್ಯಾತ್ಮಸಂಪದ್ಭರುಃ**
> **ಐಂದ್ರೀ ವೈಭವರಾಶಿರಲ್ಪಸಮಯಾ ಜಾಧ್ಯಾತ್ಮಭೂತಿಃ ಪರಮ್ ।**
> **ಶಶ್ವತ್ ಸೌಖ್ಯಪರಾ ಸುಸಾಧನಫಲಾ ಸುಜ್ಞಾನಯಜ್ಞೈರ್ದೃಢಾ**
> **ಸಚ್ಛ್ರೀರಾಘವಪಾದಸೇವನಫಲಾ ಸದ್ರಾಘವೇಂದ್ರಾಶ್ರಯಾ ॥ 6 ॥**

ಶ್ರೀಸೂರೀಂದ್ರರ್ತೀರ್ಥಗುರುಃ – ಶ್ರೀಸೂರೀಂದ್ರಗುರುಗಳು ಸುರೇಂದ್ರ ವಿಭವಃ – ದೇವತೆಗಳ ಒಡೆಯನಾದ ಸುರೇಂದ್ರನಂತೆ ಸಂಪದ್ಭರಿತರಾಗಿದ್ದಾರೆ. ಶ್ರೀಸೂರೀಂದ್ರತೀರ್ಥರ ಸಂಪತ್ತು ಆಧ್ಯಾತ್ಮ ಸಂಪದ್ಭರುಃ – ಆಧ್ಯಾತ್ಮಿಕ ಸಂಪತ್ತಾಗಿದೆ. ಐಂದ್ರೀ ವೈಭರಾಶಿಃ – ದೇವೇಂದ್ರನ ಚ ಐಶ್ವರ್ಯವು ಅಲ್ಪಸಮಯಾ – ಸ್ವಲ್ಪಸಮಯದವರೆಗೆ ಮಾತ್ರ ಇರುತ್ತದೆ. ಪರಂ – ಆದರೆ ಆಧ್ಯಾತ್ಮಭೂತಿಃ – ಶ್ರೀಸೂರೀಂದ್ರತೀರ್ಥರ ಆಧ್ಯಾತ್ಮಿಕ ಸಂಪತ್ತು ಸುಜ್ಞಾನಯಜ್ಞೈಃ – ಶ್ರೇಷ್ಠವಾದ ಜ್ಞಾನಯಜ್ಞಗಳಿಂದ ದೃಢಾ – ದೃಢವಾದ, ಸುಸಾಧನಫಲಾ – ಶ್ರವಣ ಮನನ ನಿಧಿಧ್ಯಾಸನ ಇತ್ಯಾದಿ ಸಾಧನಗಳಿಂದ ಫಲರೂಪಿಯಾದ, ಶಶ್ವತ್ ಸೌಖ್ಯಪರಾ – ಶಾಶ್ವತವಾದ ಸುಖವನ್ನು ದಯಪಾಲಿಸುತ್ತದೆ. ಆ ಫಲವು ಸಚ್ಛ್ರೀರಾಘವಪಾದಸೇವನಫಲಾ – ಸರ್ವೋತ್ತಮನಾದ ಶ್ರೀಮೂಲರಾಮದೇವರ ಸೇವನೆಯಿಂದ ಪ್ರಾಪ್ತವಾಗಿದೆ. ಅಲ್ಲದೆ ಆ ಫಲವು ಸದ್ರಾಘವೇಂದ್ರಾಯಾ – ಸಾತ್ವಿಕರಾದ ಶ್ರೀರಾಘವೇಂದ್ರಸ್ವಾಮಿಗಳನ್ನು ಆಶ್ರಯಿಸಿದ್ದರಿಂದ ಸಾಧ್ಯವಾಗಿದೆ.

ಇಲ್ಲಿ ಶ್ರೀಸೂರೀಂದ್ರತೀರ್ಥರ ವೈಭವಕ್ಕೂ, ಶ್ರೇದೇವೇಂದ್ರನ ವೈಭವಕ್ಕೂ ಭೇದವನ್ನು ಎತ್ತಿ ತೋರಿಸಿದ್ದರಿಂದ ''ವ್ಯತಿರೇಕಾಲಂಕಾರ'' ವೆಂಬ ಅಲಂಕಾರವಿದೆಯೆಂದು ಹೇಳಬಹುದು.

**ಹೇತುಮಾಲಾಲಂಕಾರಃ -**

> **ಶ್ರೀಸೂರೀಂದ್ರಗುರೋಃ ಕೃಪಾ ಜನಯಿತಾ ಸದ್ರಾಘವೇಂರ್ದೇ ರತಿಮ್**
> **ಸಾ ಭದ್ರಂ ಜನಯೇದ್ರತಿಂ ವರಗುರೋಃ ಸಚ್ಛಾಸ್ತ್ರಪಾರಾಯಣೇ ।**
> **ಜ್ಞಾನಾಢ್ಯೇ ಸತಿ ಸಾಧಕೇ ಭಗವತಃ ಸತ್ಪ್ರೀತಿಮಾಪ್ಯೇತ ಹಿ**
> **ಪ್ರೀತ್ಯಾ ತೋಷತತಿಂ ಸುಸಾಧಿತವತೋ ಧನ್ಯತ್ವಮಾಶಸ್ಯತೇ ॥ 7 ॥**

ಶ್ರೀಸೂರೀಂದ್ರಗುರೋಃ ಕೃಪಾ – ಶ್ರೀಸೂರೀಂದ್ರಗುರುಗಳ ಕೃಪೆಯು ಸದ್ರಾಘವೇಂದ್ರೇ ರತಿಂ – ಶ್ರೀರಾಘವೇಂದ್ರ ತೀರ್ಥರಲ್ಲಿ ಭಕ್ತಿಯನ್ನು ಜನಿಯಿತಾ – ಹುಟ್ಟಿಸುತ್ತದೆ. ಸಾ – ಶ್ರೀರಾಘವೇಂದ್ರತೀರ್ಥರಲ್ಲಿ ಉಂಟಾದ ಆಸಕ್ತಿಯು, ಭದ್ರಂ – ಖಂಡಿತವಾಗಿಯೂ ವರಗುರೋಃ – ಶ್ರೇಷ್ಠರಾದ ಗುರುಗಳಾದ ಶ್ರೀಮಧ್ವಾಚಾರ್ಯರ, ಶ್ರೀಜಯತೀರ್ಥರ, ಶ್ರೀರಾಘವೇಂದ್ರ ತೀರ್ಥರ, ಇತ್ಯಾದಿಯಾದ ಗುರುಗಳ ಸಚ್ಛಾಸ್ತ್ರಪಾರಾಯಣೆ – ಉತ್ತಮವಾದ ಶಾಸ್ತ್ರಗ್ರಂಥಗಳ ಪಾರಾಯಣದಲ್ಲಿ ರತಿಂ – ಆಸಕ್ತಿಯನ್ನು ಜನಯೇತ್ – ಹುಟ್ಟಿಸುತ್ತದೆ. ಸಾಧಕೇ – ಸಾಧಕನು ಜ್ಞಾನಾಢ್ಯೇ ಸತಿ – ಶಾಸ್ತ್ರ ಗ್ರಂಥಗಳ ಅಧ್ಯಯನದಿಂದ ಜ್ಞಾನ ಸಂಪನ್ನನಾದಮೇಲೆ, ಅಂದರೆ ಭಗವಂತನ ಅಪರೋಕ್ಷಜ್ಞಾನವುಂಟಾದಮೇಲೆ, ಭಗವತಃ – ಪರಮಾತ್ಮನ ಸತ್ಪ್ರೀತಿಂ – ಉತ್ತಮ ವಾದ ಪ್ರೀತಿಯನ್ನು ಆಪ್ಯೇತ ಹಿ – ಖಂಡಿತವಾಗಿಯೂ ಪಡೆಯುತ್ತಾನೆ. ಪ್ರೀತ್ಯಾ – ಭಗವಂತನ ಪ್ರಸಾದದಿಂದ ತೋಷತತಿಂ – ಶಾಶ್ವತಸುಖರೂಪವಾದ ಮೋಕ್ಷವನ್ನು ಸುಸಾಧಿತವತಃ – ಚೆನ್ನಾಗಿ ಸಾಧಿಸಿದವನಿಗೆ ಧನ್ಯತ್ವಂ – ಧನ್ಯತ್ವವು ಆಶಸ್ಯತೇ – ಪ್ರಶಂಸಿಸಲ್ಪಡುತ್ತದೆ. ಈ ರೀತಿಯಾಗಿ ಮೋಕ್ಷವನ್ನು ಪಡೆದವನು ನಿಜವಾಗಿಯೂ ಧನ್ಯನು, ಎಂದು ಸಜ್ಜನರು ಪ್ರಶಂಸಿಸುತ್ತಾರೆ.

ಇಲ್ಲಿ ಒಂದು ಪರಿಣಾಮಕ್ಕೆ ಒಂದು ಹೇತುವು ಹೇಳಲ್ಪಡುವುದರಿಂದ, 'ಹೇತಮಾಲಾಲಂಕಾರ' ವೆಂಬ ಅಲಂಕಾರವು ಇರುವುದಾಗಿ ಹೇಳುತ್ತಾರೆ.

Rarest Archiver

ವಿರೋಧಾಭಾಸಾಲಂಕಾರಃ –

> **ಶ್ರೀಸೂರೀಂದ್ರಗುರುಃ ಸುರಾಧಿಪನುತಃ ಸತ್ಕಲ್ಪವೃಕ್ಷಾಶ್ರಯಃ**
> **ಸೂರೀಣಾಂ ರುಚಿರಂ ಮನೋಭಿಮತಮಾಢ್ಯಂ ಹ್ಯಾಶು ಚಾಶ್ರಾಣಯೇತ್ ।**
> **ಸದ್ಯಾಂಚಾಮನುಸೃತ್ಯ ವರ್ಧಯತಿ ಕಾಮಂ ಚೈವ ಕಲ್ಪದ್ರುಮಃ**
> **ಮೌನೀಂದ್ರಶ್ಚ ಹೃದಿ ಸ್ಥಿತಂ ದಿಶತಿ ಸದ್ಭಿರ್ವೈ ಸದಾ ಶಂಸಿತಃ ॥ 8 ॥**

ಶ್ರೀಸೂರೀಂದ್ರಗುರುಃ – ಶ್ರೀಸೂರೀಂದ್ರತೀರ್ಥರೆಂಬ ಗುರುಗಳು, ಸುರಾಧಿಪನುತಃ – ದೇವತೆಗಳ ಒಡೆಯನಾದ ಸುರೇಂದ್ರನಿಂದ ಕೂಡ ಸ್ತೋತ್ರಮಾಡಲ್ಪಡುತ್ತಾರೆ. ಸತ್ಕಲ್ಪವೃಕ್ಷಾಶ್ರಯಃ – ಉತ್ತಮವಾದ ಕಲ್ಪವೃಕ್ಷವನ್ನು ಆಶ್ರಿಯಿಸುವುದು, ಸೂರೀಣಾಂ – ಜ್ಞಾನಿಗಳಿಗೆ ಅವರ, ರುಚಿರಂ – ಮನೋಜ್ಞವಾದ ಆಢ್ಯಂ – ಉತ್ತಮವಾದ ಮನೋಽಭಿಮತಂ – ಮನಸ್ಸಿಗೆ ಅಭೀಷ್ಟವಾದುದನ್ನು, ಹಿ – ಖಂಡಿತವಾಗಿಯೂ, ಆಶು ಚ – ಶೀಘ್ರವಾಗಿಯೇ, ಆಶ್ರಾಣಯೇತ್ – ದಾನ ಮಾಡುತ್ತದೆ. ಆದರೆ ಕಲ್ಪವೃಕ್ಷಕ್ಕೂ, ಹಾಗೂ ಶ್ರೀಸೂರೀಂದ್ರತೀರ್ಥರಿಗೂ, ಒಂದು ಮಹತ್ತರವಾದ ಅಂತರವಿದೆ. ಕಲ್ಪದ್ರುಮಃ ಚ – ಕಲ್ಪವೃಕ್ಷವು ಮಾತ್ರ, ಸದ್ಯಾಂಚಾಂ – ಸಜ್ಜನರು ಮಾಡುವ ಯಾಚನೆಯನ್ನು ಅನುಸೃತ್ಯ ಏವ – ಅನುಸರಿಸಿಯೇ, ಕಾಮಂ – ಅಭೀಷ್ಟವನ್ನು ವರ್ಧಯತಿ – ಪೂರೈಸುತ್ತದೆ. ಆದರೆ ಮೌನೀಂದ್ರಶ್ಚ – ಮುನಿಶ್ರೇಷ್ಠರಾದ ಶ್ರೀಸೂರೀಂದ್ರತೀರ್ಥರಾದರೋ, ಹೃದಿ ಸ್ಥಿತಂ – ಭಕ್ತ ಹೃದಯದಲ್ಲಿ ಇದ್ದುದನ್ನು ತಿಳಿದುಕೊಂಡು, ಅವರು ಕೇಳುವ ಮೊದಲೇ ದಿಶತಿ–ದಾನ ಮಾಡಿ ಪೂರೈಸುತ್ತದೆ. ಆದ್ದರಿಂದ, ಶ್ರೀಸೂರೀಂದ್ರತೀರ್ಥರು ಮಾತ್ರ, ಸದ್ಭಿಃ ವೈ – ಎಲ್ಲ ಸಜ್ಜನರಿಂದಾದರೋ ಸದಾ – ಸದಾಕಾಲದಲ್ಲಿ, ಶಂಸಿತಃ – ಪ್ರಸಂಸಿಸಲ್ಪಡುತ್ತಾರೆ.

ಇಲ್ಲಿ ಕಲ್ಪವೃಕ್ಷಕ್ಕೂ, ಶ್ರೀಸುರೇಂದ್ರತೀರ್ಥರಿಗೂ ಭಕ್ತರ ಅಭೀಷ್ಟಗಳನ್ನು ಪೂರೈಸುವ ವಿಷಯದಲ್ಲಿ ವಿರೋಧವು ಇರುವಂತೆ ತೋರಿಸಲಾಗಿದೆ. ಆದ್ದರಿಂದ ವಿರೋಧಾಭಾಸವೆಂಬ ಅಲಂಕಾರವು ಇಲ್ಲಿ ಇರುವುದಾಗಿ ತಿಳಿಯಬೇಕು.

> **ಪಂಚಮುಖ್ಯಭಿಧಾಭಾಜಾ ರಾಘವೇಂದ್ರಾರ್ಯಸೂನುನಾ**
> **ವಾದಿರಾಜೇನ ರಚಿತಾ ಶ್ರೀಸೂರೀಂದ್ರುಗುರುಸ್ತುತಿಃ ॥ 9 ॥**

Rarest Archiver

Rarest Archiver